ಅಭಿಯಾಚನೆ ಕ್ರಮಾಂಕ ೪೫, ಕಟ್ಟಡಗಳಂ

"ರಾಜ್ಯ ಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೬೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಟ್ಟಡಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭,೩೮,೪೯,೦೦೦-ರೂ. ಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೧,೯೭,೩೧ ೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೪೬ ರಸ್ತೆಗಳು ಮತ್ತು ಸೇತುವೆಗಳಂ

"ರಾಜ್ಯ ಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೬೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆಗಳು ಮತ್ತು ಸೇತುವೆಗಳಿಗೆ ಸಂದಾಯಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೫೯,೭೧,೩೯,೦೦೦ ರೂ. ಗಳಿಗಿಂತ ಮೀರಾದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೧,೯೭,೩೧,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಧ್ಯಕ್ಷರಂ.— ಈಗ ಪ್ರಶ್ನೋತ್ತರಗಳು.

ಚುಕ್ಕೆಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು.

ಶ್ರೀ ಹೆಚ್. ಸಿ. ಮಹದೇವಪ್ಪ.— ಮಾನ್ಯ ಸದಸ್ಯರ ಗೈರು ಹಾಜರಿ.

ಶಹಬಾದ್ ವಿಧಾನ ಸಭಾ ಕ್ಷೇತ್ರದಲ್ಲಿರುವ ಎ, ಎನ್. ಎಂ. ಕೇಂದ್ರಗಳು.

೧೩೨೦. **ಶ್ರೀ ಕೆ. ಬಿ ಶಾಣಪ್ಪನವರು (ಶಹಬಾದ್).**— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಹಬಾದ್ ವಿಧಾನ ಸಭಾ ಕ್ಷೇತ್ರಗಳಲ್ಲಿ ಎಷ್ಟು ಎ. ಎನ್. ಎಂ. ಕೇಂದ್ರಗಳಿವೆ, ಅವುಗಳ ಪ್ರಾರಂಭ ಯಾವ ಯಾವ ವರ್ಷಗಳಲ್ಲಿ ಆಯಿತು. ಹಾಗೂ ಅವುಗಳ ಹೆಸರುಗಳನ್ನು ತಿಳಿಸುವುದು.

ಆ) ಅವುಗಳನ್ನು ಯಾವ ಆಧಾರದ ಮೇಲೆ ಮಂಜೂರು ಮಾಡಲಾಗುವುದು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು).—

ಅ) ಶಹಬಾದ್ ವಿಧಾನ ಸಭಾ ಕ್ಷೇತ್ರದಲ್ಲಿ ೨೪ ಎ. ಎನ್. ಎಂ. ಉಪ ಕೇಂದ್ರಗಳಿವೆ. ಅವುಗಳ ಸ್ಥಾಪನೆ ೧೯೬೩ರಲ್ಲಿ ಆಗಿದೆ ಅವುಗಳ ಹೆಸರುಗಳು ಈ ಕೆಳಕಂಡಂತಿವೆ.

೧) ಖಿಂಡಾಲ್
೨) ಹೆರೂರು
೩) ಪಟ್ಟಣ್
೪) ಫೆತೇಹಾಬಾದ್
೫) ಬಸಾಪಟ್ಟಣ್
೬) ಹುಣಸಿಹಡ್ಗಿಲ್
೭) ಜೋಗೂರು
೮) ಕೊತ್ತನೂರು
೯) ಬಿ. ನರಡಗಿ
೧೦) ಕಡ್ಡಿ
೧೧) ಕೋವಳಗ
೧೨) ಎನ್. ಸಸರಡ್ಡಿ
೧೩) ಇಟ್ಟಗಿ

೧೪) ನಂದೂರ್ 'ಬಿ'
೧೫) ಹೆಚ್. ಸಾವಲಗಿ
೧೬) ಆರತಿಹಡಗಿಲ್
೧೭) ಸಿಸ್ಗಿ
೧೮) ಕೆರಂಗಿ
೧೯) ತಟ್ಟಿಗೊನ್ನೂರ್
೨೦) ನಾಲ್ವರ್ — ೩
೨೧) ಶಹಬಾದ್ — ೨

ಆ) ಎ. ಎನ್. ಎಂ. ಉಪಕೇಂದ್ರಗಳನ್ನು ಸಾಮಾನ್ಯವಾಗಿ ಐದು ಸಾವಿರ ಜನಸಂಖ್ಯೆಗೊಂದರಂತೆ ಹಾಗೂ ಗುಡ್ಡ ಪ್ರದೇಶಗಳಲ್ಲಿ ಮೂರು ಸಾವಿರ ಜನ ಸಂಖ್ಯೆಗೊಂದರಂತೆ ಪಂಜೂರು ಮಾಡಲಾಗುವುದು.

ಶ್ರೀ ಕೆ. ಬಿ. ಶಾಣಪ್ಪ.— ಮಾನ್ಯ ಮಂತ್ರಿಗಳು ೨೪ ಎಎನ್ಎಂ ಕೇಂದ್ರಗಳು, ಶಹಾಬಾದ್ ಕ್ಷೇತ್ರದಲ್ಲಿ ಬರುತ್ತವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನನ್ನ ಕ್ಷೇತ್ರದಲ್ಲಿ ೨೪ ಅಲ್ಲ, ೧೨ ಮಾತ್ರ ಬರುತ್ತವೆ. ನಾನು ಕೇಳಿದ್ದುದು ಶಹಾಬಾದ್ ಕ್ಷೇತ್ರದಲ್ಲಿ ಎಷ್ಟು ಕೇಂದ್ರಗಳು ಬರುತ್ತವೆ. ಎಂದು. ಶಹಾಬಾದ್ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಹಳ್ಳಿಗಳು ಎಷ್ಟು ಇವೆ ಎಂಬುದನ್ನು ಕೂಡ ನೋಡುವುದಕ್ಕೆ ಅಧಿಕಾರಿಗಳು ಹೋಗಿಲ್ಲ. ಇದರಲ್ಲಿ ಕೆಲವು ಕಮಲಾಪುರ ಪಟ್ಟಿಗೆ. ಕೆಲವು ಗುಲ್ಬರ್ಗಕ್ಕೆ ಕೆಲವು ಚಿತ್ತಾಪುರಕ್ಕೆ ಬರುತ್ತವೆ. ಈ ಪ್ರಕಾರವಾಗಿ ಮಂತ್ರಿಗಳು ಉತ್ತರವನ್ನು ಕೊಟ್ಟರೆ ಹೇಗೆ We are not happy with these officers. ಪ್ರಶ್ನೆಗಳನ್ನೆ ಕೇಳಬೇಡಿ ಎಂದು ಹೇಳಿ, ನಾವು ಕೇಳುವುದಿಲ್ಲ. ಅಧಿಕಾರಿಗಳಿಗೆ ನೇರವಾಗಿ ಸೂಚನೆ ಕೊಟ್ಟು ಶಹಾಬಾದ್ ಕ್ಷೇತ್ರದಲ್ಲಿ ಎಷ್ಟು ಕೇಂದ್ರಗಳು ಬರುತ್ತವೆ. ಎಂದು ಕೇಳಿ ?

ಶ್ರೀ ಎಚ್. ಎಲ್. ತಿಮ್ಮೇಗೌಡ.— ಅಧಿಕಾರಿಗಳು ತಾಲ್ಲೂಕಿನ ಮಟ್ಟದಲ್ಲಿ ಲೆಕ್ಕವನ್ನು ಇಟ್ಟುಕೊಂಡಿದ್ದಾರೆ. ವಿಧಾನಸಭಾ ಕ್ಷೇತ್ರದ ಲೆಕ್ಕವನ್ನು ಇಟ್ಟುಕೊಂಡಿಲ್ಲ.

ಶ್ರೀ ಕೆ. ಬಿ. ಶಾಣಪ್ಪ.— ನಾನು ಕೇಳಿದ ಪ್ರಶ್ನೆಗೆ ಉತ್ತರ ಬರಬೇಕು. ಶಹಾಬಾದ್ ಕ್ಷೇತ್ರದಲ್ಲಿ ಯಾವ ಯಾವ ವರ್ಷಗಳಿಂದ ಈ ಕೇಂದ್ರಗಳನ್ನು ತೆರೆಯಲಾಯಿತು ಮತ್ತು ಎಷ್ಟು ಕೇಂದ್ರಗಳು ಇವೆ ಎಂದು ನನಗೆ ಉತ್ತರ ಬೇಕು. For this, I wanted answer from the Hon. Minister.

ಶ್ರೀ ಎಚ್. ಎಲ್. ತಿಮ್ಮೇಗೌಡ.— ಪ್ರತಿಯೊಂದು ಕ್ಷೇತ್ರದಲ್ಲಿರುವ ಕೇಂದ್ರಗಳನ್ನು ಅಧಿಕಾರಿಗಳು ನೋಡಿಕೊಂಡು ಉತ್ತರ ಕೊಡುವಂಥದ್ದು ಸ್ವಲ್ಪ ಕಷ್ಟದಾಯಕವಾದುದು. ಆದಕ್ಕಾಗಿ ತಾಲ್ಲೂಕಿನ ಲೆಕ್ಕವನ್ನು ಕೊಟ್ಟಿದ್ದಾರೆ.

SRI K. B. SHANAPPA.— They cannot give Worng answers to this House.

ಅಧ್ಯಕ್ಷರು.— ಮಾನ್ಯ ಸದಸ್ಯರು ಸಿಟ್ಟಿಗೆ ಬರಬಾರದು. ಆನಂತರ ಮಾನ್ಯ ಮಂತ್ರಿಯವರ ಹತ್ತಿರ ಹೋಗಿ ವಿವರಗಳನ್ನು ಪಡೆದುಕೊಳ್ಳಿ ಬಹುದು.

ಶ್ರೀ ಎಚ್. ಎಲ್. ತಿಮ್ಮೇಗೌಡ.— ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ. ಉಪ ಪ್ರಶ್ನೆಗಳನ್ನು ಕೇಳಿದ್ದರೆ ಸಮಾಧಾನಕರವಾದಂಥ ಉತ್ತರ ಕೊಡುತ್ತೇನೆ.

ಶ್ರೀ ಕೆ ಬಿ. ಶಾಣಪ್ಪ.— ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂಥಹ ಹಳ್ಳಿಗಳನ್ನು ತಾವುಗಳು ಗುರುತಿಸಿ ಉತ್ತರ ಹೇಳುಂಪಲ್ಲಿ ಪ್ರಯತ್ನ ಪಟ್ಟಿಲ್ಲ. ಹರಿಬರಿಯಾಗಿ ಉತ್ತರವನ್ನು ಕೊಟ್ಟಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.— ಅವರು ಕೇಳಿದ್ದುದನ್ನು, ತಾಲ್ಲೂಕಿನಲ್ಲಿ ಎಷ್ಟು ಕೇಂದ್ರಗಳು ಇವೆ ಎಂದಲ್ಲ, ಇವರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಎಷ್ಟು ಕೇಂದ್ರಗಳು ಇವೆ ಎಂದು ಕೇಳಿದ್ದಾರೆ.

ಅಧಿಕಾರಿಗಳಿಗೆ ಇವರ ಮಂತಕ್ಷೇತ್ರ ಗೊತ್ತಿಲ್ಲವೇ ? If they do not know the constituency, how can we expect that the constituency will develop.

ಶ್ರೀ ಎಂ. ಎಸ್. ಪಾಟೀಲ್.— ತನಗೆ ಕೊಟ್ಟ ಉತ್ತರ ಸರಿಯಾಗಿಲ್ಲ ಸದಸ್ಯರು ಹೇಳ್ತಿದ್ದಾರೆ.

ಅಧ್ಯಕ್ಷರು.— ತಾವುಗಳು ಅವರ ಪರವಾಗಿ ವಕಾಲತ್ತು ಮಾಡುತ್ತಿದ್ದೀರಿ. ತಾವುಗಳು ಬೇಕಾದರೆ ಇದನ್ನು ಅರ್ಧಗಂಟೆಯಂ ಚರ್ಚೆಗೆ ಕಳುಹಿಸಿ ಕೊಡಿ, ವಿವರಗಳನ್ನು ತರಿಸಿಕೊಡಬಹುದು.

ಸಂಚಾರಿ ಆರಕ್ಷರ ಕೊರತೆಯಿಂದಾಗಿ ಮಂಗಳೂರಿನಲ್ಲಿ ಸಂಚಾರಿ ಅಸ್ತವ್ಯಸ್ತ ಗೊಂಡಿರುವುದು,

೧೫೪೪. ಶ್ರೀ ಬ್ಲೇಸಿಯಸ್ ಎಂ. ಡಿ· ಸೌಜ (ಮಂಗಳೂರು).— ಮಾನ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರು ನಗರದಲ್ಲಿ ಸಾಕಷ್ಟು ಸಂಚಾರಿ ಪೋಲೀಸರ ಸಂಖ್ಯೆ ಇಲ್ಲದೇ ಸಂಚಾರದಲ್ಲಿ ಅಡಚಣೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದರೆ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ಹೌದು.

ಆ) ಸಂಚಾರಿ ಪೋಲೀಸ್ ಸಿಬ್ಬಂದಿಯನ್ನು ಹೆಚ್ಚಿಸುವ ಸಲುವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

SRI BLASIUS M. D. SOUZA.— I would like to know the present strength of the traffic police in Mangalore city and what is the required strength ? When the Govt. is going to fillup these vacancies ?

SRI B RACHAIAH.— The member of accidents...

AN. HON. MEMBER.— He is asking about the strength of Police.

SRI B. RACHAIAH.— In Mangalore the present strength of the city taffic police is; 1 CPI, 2 PSI, 6 SCs, 76 PCs. This is the traffice police strength allocated to that area.

SRI BLASIUS D'SOUZA.— I would like to know the requird strengths of the Manglore city traffic police. Also, when the Hon. Minister is going to fill up the vacancies ?

SRI B. RACHAIAH.— This year, I have already mentioned in my reply to demands that certain number of posts will be created for this area and I will see that the staff required is provided for.

ಬಂಟ್ವಾಳ ಟೌನ್‌ನಲ್ಲಿ ಹೊಸ ಆರಕ್ಷಕರ ವಸತಿ ಗೃಹವನ್ನು ನಿರ್ಮಿಸುವುದು.

೧೫೬೭. ಶ್ರೀ ರಮಾನಾಥ ರೈ (ಬಂಟ್ವಾಳ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಂಟ್ವಾಳದ ಪೋಲೀಸ್ ವಸತಿ ಗೃಹವು ನಾ ದುರಸ್ತಿಯಲ್ಲಿದ್ದು ಅದರಲ್ಲಿ ವಾಸಿಸುವುದೇ ಕಷ್ಟ ಸಾಧ್ಯವಾಗಿರುವುದು ಸರ್ಕಾರದ ಗಮನದಲ್ಲಿದೆಯೆ ?